# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1827** |
| ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್.ಎಸ್.<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 23-03-2026 |
| ಉತ್ತರಿಸುವ ಸಚಿವರು | | ಮಾನ್ಯ ಇಂಧನ ಸಚಿವರು |

****

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ 'ಗೃಹಜ್ಯೋತಿ' ಯೋಜನೆ ಜಾರಿಯಾದ ದಿನದಿಂದ ಈವರೆಗೆ ಒಟ್ಟು ಎಷ್ಟು ಗ್ರಾಹಕರು ನೋಂದಾಯಿಸಿಕೊಂಡಿದ್ದಾರೆ ಮತ್ತು ಪ್ರತಿ ತಿಂಗಳು ಸರಾಸರಿ ಎಷ್ಟು ಗ್ರಾಹಕರು "ಶೂನ್ಯಬಿಲ್" (Zero Bill) ಪಡೆಯುತ್ತಿದ್ದಾರೆ: (ಎಸ್ಕಾಂವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ 'ಗೃಹ ಜ್ಯೋತಿ' ಯೋಜನೆ ಜಾರಿಯಾದ ದಿನದಿಂದ (ಆಗಸ್ಟ್-2023 ರಿಂದ) ಜನವರಿ-2026ರವರೆಗೆ ನೊಂದಾಯಿಸಿಕೊಂಡಿರುವ ಸ್ಥಾವರಗಳ ಸಂಖ್ಯೆಯ ವಿವರಗಳನ್ನು ಹಾಗೂ ಪ್ರತೀ ತಿಂಗಳ ಸರಾಸರಿ ಶೂನ್ಯ ಬಿಲ್ (Zero Bill) ಪಡೆದಿರುವ ಸ್ಥಾವರಗಳ ಸಂಖ್ಯೆಯ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ. |
| ಆ) | ಈ ಯೋಜನೆಗಾಗಿ ಸರ್ಕಾರವು ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಿಗೆ (BESCOM, MESCOM, HESCOM, GESCOM, CESC) ಮರುಪಾವತಿ ಪಾವತಿ ಮಾಡಬೇಕಾದ ಒಟ್ಟು ಸಬ್ಸಿಡಿ ಮೊತ್ತ ಎಷ್ಟು; ಈ ಪೈಕಿ ಈವರೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಮತ್ತು ಇನ್ನೂ ಎಷ್ಟು ಮೊತ್ತ ಬಾಕಿ ಉಳಿದಿದೆ; | ಸರ್ಕಾರವು ಪ್ರತೀ ಮಾಹೆಯಲ್ಲಿ ಸಹಾಯಧನ ಮೊತ್ತವನ್ನು ಮುಂಗಡವಾಗಿ ವಿದ್ಯುತ್ ಸರಬರಾಜು ಕಂಪನಿಗಳಿಗೆ ಬಿಡುಗಡೆ ಮಾಡಲಾಗುತ್ತಿದ್ದು, ಪ್ರತೀ ಮಾಹೆಯ ಬೇಡಿಕೆ ಮತ್ತು ಬಿಡುಗಡೆಯ ಸಮನ್ವಯವು ಪ್ರತೀ ತ್ರೈಮಾಸಿಕವಾಗಿ ನಿರ್ವಹಿಸಿ ವ್ಯತ್ಯಾಸದ ಮೊತ್ತವನ್ನು ಸರ್ಕಾರದ ವತಿಯಿಂದ ಆರ್ಥಿಕ ವರ್ಷದ ಅಂತ್ಯದಲ್ಲಿ ಬಿಡುಗಡೆಗೊಳಿಸಲಾಗುತ್ತಿದೆ.<br><br>2023-24 (ಆಗಸ್ಟ್-2023 ರಿಂದ ಮಾರ್ಚ್-2024ರವರೆಗೆ) ಹಾಗೂ 2024-25 ರ ಸಾಲಿನಲ್ಲಿ ಬೇಡಿಕೆ ಮತ್ತು ಬಿಡುಗಡೆಯ ವಿವರಗಳು ಈ ಕೆಳಕಂಡಂತಿರುತ್ತದೆ.<br><br>ರೂ. ಕೋಟಿಗಳಲ್ಲಿ<br><br>**ವರ್ಷ** / **ಬೇಡಿಕೆ** / **ಬಿಡುಗಡೆ** / **ವ್ಯತ್ಯಾಸ**<br>2023-24 (8 ತಿಂಗಳು) / 5574.98 / 5830 / (-) 255.02<br>2024-25 (12 ತಿಂಗಳು) / 9324.63 / 9157.66 / (+) 166.97<br>**ಒಟ್ಟು** / **14899.61** / **14987.66** / **(-) 88.05**<br><br>2023-24 ಮತ್ತು 2024-25 ರ ಸಾಲಿಗೆ ಸಂಬಂಧಿಸಿದಂತೆ ಗೃಹ ಜ್ಯೋತಿ ಯೋಜನೆಯಡಿ ಸಹಾಯಧನ ಬಿಡುಗಡೆ ಬಗ್ಗೆ ಯಾವುದೇ ಬಾಕಿ ಇರುವುದಿಲ್ಲ.<br><br>2025-26 ನೇ ಸಾಲಿನ ಸಹಾಯಧನದ ಬೇಡಿಕೆ ಮತ್ತು ಬಿಡುಗಡೆಯ ವಿವರಗಳು ಸಮನ್ವಯ ಪ್ರಕ್ರಿಯೆ ಹಂತದಲ್ಲಿರುತ್ತದೆ. |

| | | |
|---|---|---|
| ಇ) | ಸಬ್ಸಿಡಿ ಹಣ ಬಿಡುಗಡೆ ಮಾಡಲು ವಿಳಂಬವಾಗುತ್ತಿರುವುದರಿಂದ ಎಸ್ಕಾಂಗಳು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವುದು ಮತ್ತು ವಿದ್ಯುತ್ ಖರೀದಿ ವೆಚ್ಚ ಪಾವತಿಸಲು ಹಾಗೂ ನಿರ್ವಹಣಾ ವೆಚ್ಚ ಭರಿಸಲು ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಸರ್ಕಾರದ ವತಿಯಿಂದ ಬಿಡುಗಡೆಗೊಳಿಸುತ್ತಿರುವ ಗೃಹ ಜ್ಯೋತಿ ಸಹಾಯಧನವನ್ನು ಮುಂಗಡವಾಗಿ ವಿದ್ಯುತ್ ಸರಬರಾಜು ಕಂಪನಿಗಳಿಗೆ ಪ್ರತಿ ಮಾಹೆಯಲ್ಲಿ ಬಿಡುಗಡೆ ಮಾಡಲಾಗುತ್ತಿದ್ದು, ಪ್ರತೀ ಮಾಹೆಯ ಬೇಡಿಕೆ ಮತ್ತು ಬಿಡುಗಡೆಯ ಸಮನ್ವಯವು ಪ್ರತೀ ತ್ರೈಮಾಸಿಕವಾಗಿ ನಿರ್ವಹಿಸಿ ವ್ಯತ್ಯಾಸದ ಮೊತ್ತವನ್ನು ಸರ್ಕಾರದ ವತಿಯಿಂದ ಆರ್ಥಿಕ ವರ್ಷದ ಅಂತ್ಯದಲ್ಲಿ ಬಿಡುಗಡೆಗೊಳಿಸಲಾಗುತ್ತಿದೆ.<br><br>ಸದರಿ ಪ್ರಕ್ರಿಯೆಯಿಂದಾಗಿ ವಿದ್ಯುತ್ ಖರೀದಿ ಮತ್ತು ವಿದ್ಯುತ್ ನಿರ್ವಹಣೆಗೆ ತೊಂದರೆಯಾಗಿರುವುದಿಲ್ಲ. |
| ಈ) | ಸರಾಸರಿ ಬಳಕೆ + 10% ಎಂಬ ನಿಯಮದಿಂದಾಗಿ ಅನೇಕ ಅರ್ಹ ಫಲಾನುಭವಿಗಳು ಯೋಜನೆಯ ಲಾಭದಿಂದ ವಂಚಿತರಾಗುತ್ತಿದ್ದಾರೆ ಎಂಬ ದೂರುಗಳು ಕೇಳಿ ಬರುತ್ತಿವೆ: 200 ಯೂನಿಟ್‌ಗಳವರೆಗೆ ಸಂಪೂರ್ಣ ಉಚಿತ ಎಂದು ಘೋಷಿಸಿ ಈಗ ಮಿತಿ ಹೇರಿರುವುದು ಸಾರ್ವಜನಿಕರಿಗೆ ಮಾಡಿದ ಅನ್ಯಾಯವಲ್ಲವೇ; | ರಾಜ್ಯ ಸಚಿವ ಸಂಪುಟದ ನಿರ್ಣಯದಂತೆ ರಾಜ್ಯದಲ್ಲಿನ ಪ್ರತಿ ಮನೆಗೆ ಗರಿಷ್ಟ 200 ಯೂನಿಟ್‌ಗೊಳಪಟ್ಟ ಉಚಿತ ವಿದ್ಯುತ್ ನೀಡುವ ಯೋಜನೆ ಜಾರಿಗೊಳಿಸಲಾಗಿರುತ್ತದೆ. |
| ಉ) | ಎಸ್ಕಾಂಗಳು ಬ್ಯಾಂಕುಗಳಿಂದ ಪಡೆದಿರುವ ಸಾಲದ ಪ್ರಮಾಣ ಹೆಚ್ಚುತ್ತಿರುವುದರಿಂದ, ಈ ಹೊರೆಯನ್ನು ಮುಂದೆ 'ಇಂಧನ ಹೊಂದಾಣಿಕೆ ಶುಲ್ಕ' (FAC) ಹೆಸರಿನಲ್ಲಿ ಮತ್ತೆ ಜನಸಾಮಾನ್ಯರ ಮೇಲೆ ಹೇರಲು ಸರ್ಕಾರ ಉದ್ದೇಶಿಸಿದೆಯೇ? | ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ FPPCA ಆದೇಶ ಸಂಖ್ಯೆ: B/5/12/2807, ದಿನಾಂಕ: 23.02.2023 ರ ಪ್ರಕಾರ ವಿದ್ಯುತ್ ಖರೀದಿಯಲ್ಲಿ ಉಂಟಾಗುವ ವ್ಯತ್ಯಾಸದ ಮೊತ್ತವನ್ನು ಇಂಧನ ಹೊಂದಾಣಿಕೆ ಶುಲ್ಕದ ಮೂಲಕ ಮಾತ್ರ ಮಾಸಿಕವಾಗಿ ಗ್ರಾಹಕರಿಂದ ವಸೂಲಿಗೊಳಿಸಲು / ಹಿಂದಿರುಗಿಸಲು ಅವಕಾಶವಿರುತ್ತದೆ. ಎಸ್ಕಾಂಗಳು ಬ್ಯಾಂಕ್‌ಗಳಿಂದ ಪಡೆದಿರುವ ಸಾಲದ ಹೊರೆಯನ್ನು ಇಂಧನ ಹೊಂದಾಣಿಕೆ ಶುಲ್ಕದ ಮೂಲಕ ಗ್ರಾಹಕರಿಂದ ವಸೂಲಿ ಮಾಡಲು ಅವಕಾಶವಿರುವುದಿಲ್ಲ. |

ಸಂಖ್ಯೆ: ಎನರ್ಜಿ 92 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಸಚಿವರು

| ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ.ಕೇಶವ ಪ್ರಸಾದ್.ಎಸ್.ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1827ಕ್ಕೆ ಅನುಬಂಧ | | |
|---|---|---|
| 2023-24 (ಆಗಸ್ಟ್-23 ರಿಂದ) ಜನವರಿ-26ರ ಅಂತ್ಯಕ್ಕೆ ಗೃಹ ಜ್ಯೋತಿ ಯೋಜನೆಯಡಿ ನೊಂದಣಿಗೊಂಡ ಸ್ಥಾವರಗಳ ಸಂಖ್ಯೆಯ ಕಂಪನಿವಾರು ವಿವರಗಳು | | |
| **ಕಂಪನಿ** | **2025-26 (ಜನವರಿ-26 ರವರೆಗೆ)** | |
| | **ನೊಂದಣಿಯಾಗಿರುವ ಸ್ಥಾವರಗಳು** | **ಶೂನ್ಯ ಬಿಲ್ ಸ್ಥಾವರಗಳು** |
| ಬೆಸ್ಕಾಂ | 7658275 | 6946558 |
| ಮೆಸ್ಕಾಂ | 1634670 | 1563139 |
| ಹೆಸ್ಕಾಂ | 3548811 | 3520090 |
| ಜೆಸ್ಕಾಂ | 2259207 | 2171708 |
| ಸೆಸ್ಕ್ | 2461742 | 2363570 |
| **ಒಟ್ಟು** | **17562705** | **16565065** |